# ಕರ್ನಾಟಕ ವಿಧಾನಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1356 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರಾಜ್ಯದಲ್ಲಿ ಎಷ್ಟು ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಲಾಗಿದೆ; | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ರೂಪದಲ್ಲಿ ಧನಸಹಾಯ ನೀಡುತ್ತಿದ್ದು, ಅದರನ್ವಯ, ಕಳೆದ ಮೂರು ವರ್ಷಗಳಲ್ಲಿ ಧನಸಹಾಯ ಯೋಜನೆಯಡಿ ಸಂಘ-ಸಂಸ್ಥೆಗಳಿಗೆ ಅನುದಾನ ನೀಡಿರುವ ವರ್ಷವಾರು ವಿವರವು ಕೆಳಕಂಡಂತಿದೆ. |

| ಕ್ರ. ಸಂ | ವರ್ಷ | ಸಂಘ-ಸಂಸ್ಥೆ | ಅನುದಾನ |
|---|---|---|---|
| **ಸಾಮಾನ್ಯ ಯೋಜನೆ** | | | |
| 1 | 2022-23 | 699 | 12,25,80,000 |
| 2 | 2023-24 | 890 | 17,28,48,000 |
| 3 | 2024-25 | 24 | 7,69,10,000 |
| **ಪರಿಶಿಷ್ಟ ಜಾತಿ ಉಪಯೋಜನೆ** | | | |
| 1 | 2022-23 | 376 | 5,60,25,000/- |
| 2 | 2023-24 | 519 | 8,86,65,000/- |
| 3 | 2024-25 | 01 | 27,00,000/- |
| **ಪರಿಶಿಷ್ಟ ಪಂಗಡ ಉಪಯೋಜನೆ** | | | |
| 1 | 2022-23 | 62 | 1,02,20,000/- |
| 2 | 2023-24 | 97 | 2,05,00,000/- |
| 3 | 2024-25 | ಧನಸಹಾಯ ಮಾರ್ಗಸೂಚಿಯನ್ನು ಪರಿಷ್ಕರಿಸಲು ಕ್ರಮ ವಹಿಸಲಾಗುತ್ತಿದ್ದು, ಕ್ರಿಯಾ ಯೋಜನೆಯಲ್ಲಿ ಅನುದಾನ ನಿಗದಿಪಡಿಸಿಕೊಂಡಿರುವುದಿಲ್ಲ. | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಆರ್ಥಿಕ ನೆರವು ನೀಡಲು ಇರುವ ಮಾನದಂಡಗಳಾವುವು: (ಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ ಕಸಂವಾ 154 ಕಸಧ 2022 ದಿನಾಂಕ:23.06.2022 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ ದಿನಾಂಕ:02.01.2023ರಲ್ಲಿ ಸಂಘ-ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲು ಮಾನದಂಡಗಳನ್ನು ನಿಗದಿಪಡಿಸಿದ್ದು, ವಿವರವನ್ನು **ಅನುಬಂಧ**ದಲ್ಲಿರಿಸಿದೆ. |

| | | |
|---|---|---|
| ಇ) | ರಾಜ್ಯದಲ್ಲಿ ಕನ್ನಡ ಭಾಷೆ ಬಳಸುವ ವಿಷಯವಾಗಿ ಹಲವಾರು ವಿವಾದಾತ್ಮಕ ಹೇಳಿಕೆಯಿಂದ ಗೊಂದಲಗಳು ಸೃಷ್ಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿರುವುದಿಲ್ಲ. |
| ಈ) | ಹೊರ ರಾಜ್ಯದಿಂದ ಇಲ್ಲಿಗೆ ಕೆಲಸ ಹುಡುಕಿಕೊಂಡು ಬಂದಂತಹವರಲ್ಲಿ ಬಹುಪಾಲು ಜನರು ಕನ್ನಡ ಬಳಸದೇ, ಅವರ ಮಾತೃ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ ಕನ್ನಡ ಭಾಷೆಗೆ ಅವಮಾನ ಮಾಡುತ್ತಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ: | |
| ಉ) | ಬಂದಿದ್ದಲ್ಲಿ, ಈ ರೀತಿಯ ಗೊಂದಲಗಳು ಮುರುಕಳಿಸದಂತೆ ಹಾಗೂ ಹೊರ ರಾಜ್ಯದಿಂದ ಬಂದಂತವರು ಕನ್ನಡದಲ್ಲಿ ವ್ಯವಹರಿಸುವಂತೆ ಸರ್ಕಾರ ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳಾವುವು? | ಕರ್ನಾಟಕದಲ್ಲಿ ವಾಸಿಸುವ ಕನ್ನಡೇತರರಿಗೆ ಕನ್ನಡ ಕಲಿಕಾ ತರಗತಿಗಳನ್ನು ಆಯೋಜಿಸುವ ಮೂಲಕ ಸಾಮರಸ್ಯವನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಕಸಂವಾ 72 ಕವಿಸ 2025

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ - 1

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ : ಸಾಮಾನ್ಯ / ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ನೊಂದಾಯಿತ ಸಂಘ-ಸಂಸ್ಥೆ / ಟ್ರಸ್ಟಗಳಿಗೆ ಧನಸಹಾಯ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು.

ಓದಲಾಗಿದೆ : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಏಕ ಕಡತ ಸಂಖ್ಯೆ: ಡಿಕೆಸಿ-33011/57/2022.

- - -

<u>ಪ್ರಸ್ತಾವನೆ:</u>

ಮೇಲೆ ಓದಲಾದ ಏಕ ಕಡತದಲ್ಲಿ, ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ ಧನಸಹಾಯ ನೀಡಲು ಸರ್ಕಾರದ ಆದೇಶ ಸಂಖ್ಯೆ: ಕಸಂವಾ 144 ಕಸಧ 2020, ದಿನಾಂಕ: 10.11.2020ರ ಅನುಬಂಧ-1ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದ್ದು, ರಾಜ್ಯಾದ್ಯಂತ ಸಾಹಿತ್ಯ, ಸಾಂಸ್ಕೃತಿಕ ವಾತಾವರಣ ಉಂಟುಮಾಡುವಲ್ಲಿ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ನಿರಂತರ ಪ್ರಯೋಗಶೀಲ ಮತ್ತು ಬದ್ಧತೆಯ ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಮಹತ್ವದ ಪಾತ್ರ ವಹಿಸುತ್ತಿವೆ. ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿ ಸಂವರ್ಧನೆಯಲ್ಲಿ ತೊಡಗಿರುವ ಕಲಾಪೋಷಕ ಸಂಘ-ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳನ್ನು ಇನ್ನಷ್ಟು ವ್ಯಾಪಕವಾಗಿ, ಗುಣಾತ್ಮಕವಾಗಿ ಅನುಷ್ಠಾನ ಮಾಡಲು ಪ್ರೋತ್ಸಾಹಿಸುವ ಉದ್ದೇಶದಿಂದ ಸಹಾಯಹಸ್ತದ ರೂಪದಲ್ಲಿ ಧನಸಹಾಯ ಯೋಜನೆ ಅನುಷ್ಠಾನ ಗೊಳಿಸಲಾಗುತ್ತಿದ್ದು, ಹಲವು ವರ್ಷಗಳಿಂದ ಜಾರಿಯಲ್ಲಿರುವ ಈ ಯೋಜನೆಯನ್ನು ಪಾರದರ್ಶಕವಾಗಿ ಹಾಗೂ ವ್ಯಾಪಕವಾಗಿ ಸಂಘ-ಸಂಸ್ಥೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಮಾರ್ಗಸೂಚಿಗಳನ್ನು ಹಾಗೂ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ.

ಮುಂದುವರೆದು, ಸಂಘ-ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜಿಲ್ಲಾ ಹಂತದ ಅನುಷ್ಠಾನಾಧಿಕಾರಿಗಳಾದ ಸಹಾಯಕ ನಿರ್ದೇಶಕರ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಇಲಾಖೆಯ ವಿಕೇಂದ್ರಿಕರಣ ನಿಟ್ಟಿನಲ್ಲಿ ವಿಭಾಗ ಮಟ್ಟದ ಕಛೇರಿಗಳಿಗೆ ಅಧಿಕಾರಿಗಳ ನಿಯೋಜನೆ ಮಾಡುವುದು, ಈ ರೀತಿಯಿಂದಾಗಿ ಧನಸಹಾಯ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕ, ಸಮಯಬದ್ಧ ವಿಲೇವಾರಿ ಹಾಗೂ ಜನಸ್ನೇಹಿಯಾಗಿ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಸಂವಾ154 ಕಸಧ 2022,</u>**
**<u>ಬೆಂಗಳೂರು, ದಿನಾಂಕ: 23.06.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ / ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಧನಸಹಾಯದ ಮಾರ್ಗಸೂಚಿಗಳನ್ನು ಅನುಬಂಧದಲ್ಲಿರುವಂತೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿದೆ.

....2

Scanned by CamScanner

ನಿಬಂಧನೆಗಳು:-

1. 2022-23ನೇ ಸಾಲಿನ ಸಾಮಾನ್ಯ / ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಧನಸಹಾಯ (ಪ್ರೋತ್ಸಾಹ) ನೀಡಲು ಎಲ್ಲಾ ಆಯ್ಕೆ ಸಮಿತಿಗಳಲ್ಲಿ ಅಧಿಕಾರೇತರ ಮತ್ತು ಅಧಿಕಾರಿಗಳ ಅನುಪಾತ ಕನಿಷ್ಠ 5.5ಕ್ಕಿಂತ ಕಡಿಮೆಯಾಗತಕ್ಕದ್ದಲ್ಲ.

2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿ ಯೋಜನೆಯ ಅನುಷ್ಠಾನಕ್ಕೆ ಅನುಷ್ಠಾನಾಧಿಕಾರಿಗಳು ಕಡ್ಡಾಯವಾಗಿ ಅನುಸರಿಸಬೇಕಾದ ವೇಳಾಪಟ್ಟಿಯನ್ನು ಸುತ್ತೋಲೆಯ ಮೂಲಕ ಹೊರಡಿಸತಕ್ಕದ್ದು. ಈ ವೇಳಾಪಟ್ಟಿಯಲ್ಲಿ ಅರ್ಜಿಗಳನ್ನು ಆಹ್ವಾನಿಸುವ ದಿನಾಂಕದಿಂದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕದ ಮಾಹಿತಿ ಮತ್ತು ಅರ್ಜಿಗಳನ್ನು ಪರಿಶೀಲನೆ ಮಾಡಲು ತೆಗೆದುಕೊಳ್ಳಬಹುದಾದ ಗರಿಷ್ಠ ಕಾಲಾವಧಿ, ಆಯ್ಕೆ ಸಮಿತಿ ಸಭೆ ಮುಗಿದ 24 ಗಂಟೆಗಳಲ್ಲಿ ಆಯ್ಕೆ ಸಮಿತಿಯ ನಡವಳಿಯನ್ನು ಕಛೇರಿಯ ಫಲಕಗಳಲ್ಲಿ ಪ್ರಚಾರಪಡಿಸುವುದು ಹಾಗೂ ಕಡ್ಡಾಯವಾಗಿ ನಿರ್ದೇಶನಾಲಯದ ಜಾಲತಾಣದಲ್ಲಿ ಅಳವಡಿಸಲು ಇರುವ ಕಾಲಮಿತಿಯನ್ನೊಳಗೊಂಡ ಅಂಶಗಳನ್ನು ಒಳಗೊಂಡಿರುವ ಸುತ್ತೋಲೆ / ನಿರ್ದೇಶನವನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಹೊರಡಿಸತಕ್ಕದ್ದು.

3. ಈ ಎಲ್ಲಾ ಯೋಜನೆಗಳಿಗೆ ಸೇವಾಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಈಗಾಗಲೇ ಲಭ್ಯವಿದ್ದಲ್ಲಿ ಕಡ್ಡಾಯವಾಗಿ ಸೇವಾಸಿಂಧು ತಂತ್ರಾಂಶದ ಮೂಲಕವೇ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು ಹಾಗೂ ಈ ಯೋಜನೆಗಳು ಸಕಾಲದಡಿ ಘೋಷಿಸಲಾಗಿದ್ದಲ್ಲಿ / ಇನ್ನು ಮುಂದೆ ಘೋಷಣೆಯಾದಲ್ಲಿ ಕಡ್ಡಾಯವಾಗಿ ಸಕಾಲದ ಕಾಲಮಿತಿಯನ್ನು ಪರಿಗಣಿಸಿ ಅರ್ಜಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡತಕ್ಕದ್ದು.

4. ಪ್ರತಿ ಯೋಜನೆಗೆ ಬರುವ ಎಲ್ಲಾ ಅರ್ಜಿಗಳ ವಿವರ ಹಾಗೂ ಆಯ್ಕೆ ಸಮಿತಿಯ ನಡವಳಿಗಳನ್ನು ಕಡ್ಡಾಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾಲತಾಣದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಇಂದೀಕರಿಸತಕ್ಕದ್ದು.

5. ಯೋಜನೆಯ ಅನುದಾನ ಪಡೆಯಲು ಇಚ್ಛಿಸುವ ಫಲಾನುಭವಿಗಳಿಗೆ ಅರ್ಜಿಗಳ ನಮೂನೆಯನ್ನು ಡೌನ್‌ಲೋಡ್ ಮಾಡಲು ಜಾಲತಾಣದಲ್ಲಿ ಅಳವಡಿಸತಕ್ಕದ್ದು / ಇಂದೀಕರಿಸತಕ್ಕದ್ದು.

6. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಧನಸಹಾಯ ಹಾಗೂ ಸಾಮಾನ್ಯ ಧನಸಹಾಯ ಯೋಜನೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುಷ್ಠಾನಗೊಳಿಸತಕ್ಕದ್ದು.

7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು, 2000 ಮತ್ತು ಕರ್ನಾಟಕ ಸರ್ಕಾರ ಆಗಿಂದಾಗ್ಗೆ ಹೊರಡಿಸಿರುವ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಇಲಾಖೆಯಿಂದ ಹಮ್ಮಿಕೊಳ್ಳುವ ಯೋಜನೆಗಳ ಕುರಿತು ಸಮಾಜ ಕಲ್ಯಾಣ ಇಲಾಖೆಯ (ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕೋಶ) ವೆಬ್‌ಸೈಟ್‌ನಲ್ಲಿ ಕೋರಿರುವ ಮಾಹಿತಿಯನ್ನು ಸಲ್ಲಿಸತಕ್ಕದ್ದು.

....3

Scanned by CamScanner

9. ವಿಶೇಷ ಸಂದರ್ಭಗಳಲ್ಲಿ ಸರ್ಕಾರವು ಕಲೆ ಮತ್ತು ಸಾಂಸ್ಕೃತಿಕ ವಾತಾವರಣವನ್ನುಂಟು ಮಾಡಬಹುದೆಂದು ಭಾವಿಸಲಾಗುವ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ಅಧಿಕಾರವನ್ನು ಹೊಂದಿರುತ್ತದೆ.

10. ಎಲ್ಲಾ ಯೋಜನೆಗಳನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್.ಡಿ. 01 ಟಿ.ಎಫ್.ಪಿ. 2022, ದಿನಾಂಕ: 04.04.2022ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ರಮೇಶ್ 23/06/2022
(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

<u>ಇವರಿಗೆ,</u>

1. ಮಹಾಲೇಖಪಾಲರು (ಎ&ಇ), (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
3. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಗಣಕ ಕೋಶ), ವಿಧಾನಸೌಧ, ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಎಲ್ಲಾ ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ)
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 154 ಕಸಧ 2022, ಬೆಂಗಳೂರು, ದಿನಾಂಕ: 23.06.2022ಕ್ಕೆ ಅನುಬಂಧ**

**ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಸಹಾಯಧನ ಮಂಜೂರಾತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳು**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ / ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಾಂಸ್ಕೃತಿಕ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು.

**ಯೋಜನೆಯ ಹೆಸರು:**

ಸಾಮಾನ್ಯ / ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯ ಯೋಜನೆ.

## I. ಯೋಜನೆಯ ಉದ್ದೇಶ:

1. ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ ಮತ್ತು ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ರೂಪದಲ್ಲಿ ಸಹಾಯಧನ ನೀಡುವುದು. ಈ ಮೂಲಕ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಸಾಂಸ್ಕೃತಿಕ ವಾತಾವರಣ ಉಂಟುಮಾಡುವಲ್ಲಿ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.

**ಯೋಜನೆಯ ವ್ಯಾಪ್ತಿ : ರಾಜ್ಯ ಹಾಗೂ ಹೊರರಾಜ್ಯ**

**ಯೋಜನೆಯ ಅನುಷ್ಠಾನ : ನಿರ್ದೇಶಕರು, ವಿಭಾಗ ಜಂಟಿ ನಿರ್ದೇಶಕರು ಮತ್ತು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

## II. ಅರ್ಜಿಗಳನ್ನು ಆಹ್ವಾನಿಸುವುದು:

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಹೊರಡಿಸುವ ವೇಳಾಪಟ್ಟಿ, ಸುತ್ತೋಲೆಯಂತೆ ವಾರ್ತಾ ಇಲಾಖೆ ಮುಖಾಂತರ ರಾಜ್ಯಮಟ್ಟದ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸುವುದು. ಆಸಕ್ತ ಸಂಘ-ಸಂಸ್ಥೆಗಳು ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಮಾಡಿ, ಆನ್ ಲೈನ್ ಮುಖಾಂತರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಸಲ್ಲಿಸಲು ಕನಿಷ್ಠ 30 ದಿನಗಳ ಕಾಲಾವಕಾಶ ನೀಡುವುದು.

## III. ನೋಂದಾಯಿತ ಸಂಘ ಸಂಸ್ಥೆಗಳಿಗೆ ಧನಸಹಾಯಕ್ಕೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಅರ್ಹತೆಗಳು:

1. ನೋಂದಾಯಿತ ಸಂಘ-ಸಂಸ್ಥೆಗಳು ಅಥವಾ ಟ್ರಸ್ಟ್‌ಗಳು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ಉದ್ದೇಶ ಹೊಂದಿ, ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರಬೇಕು.

....2

Scanned by CamScanner

2. ಸಂಘ-ಸಂಸ್ಥೆ / ಟ್ರಸ್ಟ್‌ಗಳ ಬೈಲಾದಲ್ಲಿ ಸಾಂಸ್ಕೃತಿಕ ಅಂಶಗಳು ಪ್ರಧಾನ ಉದ್ದೇಶಗಳಾಗಿದ್ದು, ಸದರಿ ಉದ್ದೇಶಗಳು ಸಂಸ್ಥೆಯ ಕಾರ್ಯಚಟುವಟಿಕೆಗಳ ಮೂಲಕ ಪ್ರತಿಬಿಂಬಿತವಾಗಬೇಕು.

3. ನೋಂದಾಯಿತ ಸಂಘ-ಸಂಸ್ಥೆಗಳು ಪ್ರತಿವರ್ಷ ನವೀಕರಣ ಮಾಡಿಸಿರಬೇಕು (ಟ್ರಸ್ಟ್‌ಗಳನ್ನು ಹೊರತುಪಡಿಸಿ).

4. ಬೇರೆ ಯಾವುದೇ ವಿವಿಧೋದ್ದೇಶ ಚಟುವಟಿಕೆಗಳಿಗೆ ರಚಿತವಾದ ಸಂಘ-ಸಂಸ್ಥೆಗಳು ಅಥವಾ ಟ್ರಸ್ಟ್‌ಗಳು (ಶಿಕ್ಷಣ, ಸಮಾಜಸೇವೆ ಮತ್ತು ಸ್ವಯಂಸೇವಾ ಸಂಸ್ಥೆಗಳು) ಮುಂತಾದವುಗಳನ್ನು ಧನಸಹಾಯಕ್ಕೆ ಪರಿಗಣಿಸಲಾಗುವುದಿಲ್ಲ.

5. ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಸಂಘ-ಸಂಸ್ಥೆಗಳು ನಿರಂತರವಾಗಿ ಮೂರು (3) ವರ್ಷಗಳಿಂದ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆ ನಡೆಸುವ ಸಂಘ-ಸಂಸ್ಥೆ / ಟ್ರಸ್ಟ್‌ಗಳಾಗಿರಬೇಕು.

6. ಅರ್ಜಿ ಆಹ್ವಾನಿಸಿದ ದಿನಾಂಕಕ್ಕೆ ಸಾಮಾನ್ಯ / ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಸಂಘ-ಸಂಸ್ಥೆಗಳು ನೋಂದಣಿಯಾಗಿ ಕನಿಷ್ಠ ಮೂರು (3) ವರ್ಷ ಪೂರೈಸಿರಬೇಕು.

7. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಂಘ-ಸಂಸ್ಥೆಗಳ ಸದಸ್ಯರು ಕಡ್ಡಾಯವಾಗಿ ಅದೇ ಸಮುದಾಯದ ಸದಸ್ಯರನ್ನು ಒಳಗೊಂಡಿರಬೇಕು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನೋಂದಾಯಿತ ಸಂಘ-ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ / ಸದಸ್ಯರುಗಳ ಜಾತಿ ಪ್ರಮಾಣಪತ್ರ (RD ಸಂಖ್ಯೆ ಹೊಂದಿರುವ) ವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸುವುದು.

8. ಇಲಾಖೆಯಿಂದ ಧನಸಹಾಯ ಪಡೆದ ಸಂಸ್ಥೆಗಳು ಆಹ್ವಾನ ಪತ್ರಿಕೆ, ವೇದಿಕೆ ಕಾರ್ಯಕ್ರಮ ಹಾಗೂ ಪ್ರಚಾರ ಸಾಮಗ್ರಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಿರಬೇಕು.

9. ಸಂಘ-ಸಂಸ್ಥೆಗಳು ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜನಪದ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ, ಮುಂತಾದ ಸೃಜನಶೀಲ ಕಲಾ ಪ್ರಕಾರಗಳಲ್ಲಿ ನಿರಂತರ ಚಟುವಟಿಕೆ ನಡೆಸಿರುವ ಬಗ್ಗೆ ಹಿಂದಿನ ವರ್ಷದ ಚಟುವಟಿಕೆಗಳ ವಿವರಗಳನ್ನು ಫೋಟೋ, ಪತ್ರಿಕಾ ವರದಿಗಳೊಂದಿಗೆ ಸಲ್ಲಿಸುವುದು ಮತ್ತು ಸಂಸ್ಥೆಯು ಸ್ಥಾಪನೆಯಾದಾಗಿನಿಂದ ಕೈಗೊಂಡ ಒಟ್ಟಾರೆ ಕಾರ್ಯಚಟುವಟಿಕೆಯ ಸಮಗ್ರ ಪರಿಚಯ ನೀಡುವ ಸಂಕ್ಷಿಪ್ತ ವರದಿ ಸಲ್ಲಿಸಬೇಕು.

10. ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಆರ್ಥಿಕ ವರ್ಷದಲ್ಲಿ ನಡೆಸಲು ಯೋಜಿಸಿರುವ ಕಾರ್ಯಕ್ರಮಗಳ ಕ್ರಿಯಾಯೋಜನೆಯನ್ನು ಅಂದಾಜು ಪಟ್ಟಿಯೊಂದಿಗೆ ಮುಂಗಡವಾಗಿ ಸಲ್ಲಿಸುವುದು.

11. ಧನಸಹಾಯ ಪಡೆಯುವ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಯ ಮೌಲ್ಯಮಾಪನದ ಸಂದರ್ಭದಲ್ಲಿ, ಅವುಗಳ ಕಾರ್ಯಕ್ರಮಗಳ ನಾವೀನ್ಯತೆ, ವೈಶಿಷ್ಟ್ಯತೆ, ಪ್ರಯೋಗಾತ್ಮಕ ಸಾಧ್ಯತೆ, ವಿಶೇಷ ವಿಷಯ ವಸ್ತುವಿನ ಮೇಲೆ ಆಧಾರಿತವಾದ ಶಿಬಿರಗಳು, ಕಮ್ಮಟಗಳು,

...3

Scanned by CamScanner

ಕಾರ್ಯಾಗಾರಗಳು, ಹೊಸ ಆವಿಷ್ಕಾರಗಳು, ಯುವ ಪ್ರತಿಭೆಗಳಿಗೆ ಪ್ರೋತ್ಸಾಹ, ವಿಕಲಚೇತನರಿಗೆ, ಮಹಿಳೆ ಮತ್ತು ಮಕ್ಕಳನ್ನು ಗಮನದಲ್ಲಿಟ್ಟುಗೊಂಡು ರೂಪಿಸುವ ಕಾರ್ಯಕ್ರಮಗಳು, ಪ್ರೋತ್ಸಾಹ ಮುಂತಾದ ಕ್ರಿಯಾತ್ಮಕ / ನಿರಂತರತೆ ಮತ್ತು ಗುಣಾತ್ಮಕವಾಗಿರುವುದರೊಂದಿಗೆ ರೂಪಿತವಾದ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು. ನಶಿಸಿ ಹೋಗುತ್ತಿರುವ ಅಪರೂಪದ ಕಲೆಗಳನ್ನು ಪುನರುಜ್ಜೀವನಗೊಳಿಸಲು ಮೂಲ ಕಲಾಪ್ರಕಾರಗಳ ಮೇಲೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸಂಘ-ಸಂಸ್ಥೆಗಳು ಆದ್ಯತೆ ನೀಡುವುದು.

12. ಧನಸಹಾಯ ಪಡೆಯಲಿಚ್ಛಿಸುವ ಸಂಘ-ಸಂಸ್ಥೆಗಳು ಜಿಲ್ಲಾ ಸಹಕಾರ ಸಂಘಗಳ / ಜಿಲ್ಲಾ ಉಪ ನೋಂದಣಾಧಿಕಾರಿಗಳಿಗೆ ಸಲ್ಲಿಸುವ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಪಡೆದ ಹಿಂದಿನ 1 (ಒಂದು) ವರ್ಷದ ಲೆಕ್ಕಪರಿಶೋಧಿತ ಮತ್ತು ದೃಢೀಕೃತ ಲೆಕ್ಕಪಟ್ಟಿಗಳನ್ನು ಮತ್ತು ಆದಾಯ ತೆರಿಗೆ ವಿವರಗಳನ್ನು ಸಂಘ-ಸಂಸ್ಥೆಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್‌ಬುಕ್, ಸ್ಟೇಟ್‌ಮೆಂಟ್‌ನೊಂದಿಗೆ ಸಲ್ಲಿಸಬೇಕು.

13. ಸಂಘ-ಸಂಸ್ಥೆ / ಟ್ರಸ್ಟ್‌ಗಳ ಬೈಲಾ ತಿದ್ದುಪಡಿಯಾದಲ್ಲಿ ಅಥವಾ ಪದಾಧಿಕಾರಿಗಳು ಬದಲಾವಣೆಯಾದ ವಿವರ ಹಾಗೂ ನೋಂದಣಿ ಮಾಡಿದ ತಿದ್ದುಪಡಿ ಬೈಲಾವನ್ನು ನೊಂದಣಾಧಿಕಾರಿಗಳ ದೃಢೀಕರಣದೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

14. ಸರ್ಕಾರದಿಂದ ನೀಡುವ ಧನಸಹಾಯವನ್ನು ಸಂಘ-ಸಂಸ್ಥೆ / ಟ್ರಸ್ಟ್‌ಗಳು ಪ್ರಧಾನವಾಗಿ ಪ್ರಶಸ್ತಿ ಪ್ರದಾನ, ಸನ್ಮಾನ ಕಾರ್ಯಕ್ರಮಗಳಿಗೆ ವೆಚ್ಚ ಮಾಡತಕ್ಕದ್ದಲ್ಲ.

15. ಸರ್ಕಾರದ ತೀರ್ಮಾನವೇ ಅಂತಿಮವಾಗಿದ್ದು, ಅನುದಾನ ಲಭ್ಯತೆಗನುಗುಣವಾಗಿ ಧನಸಹಾಯ ಮಂಜೂರು ಮಾಡುವುದು.

16. ಸಂಘ-ಸಂಸ್ಥೆಯು ಇಲಾಖೆಯಿಂದ ಪಡೆದ ಧನಸಹಾಯದ ಅಡಿಯಲ್ಲಿ ರೂಪಿಸಿದ ಕಾರ್ಯಕ್ರಮಗಳು, ದಾಖಲೆಗಳು, ಪ್ರಕಟಣೆಗಳು, ಕಾರ್ಯಕ್ರಮಗಳ ಆಡಿಯೋ ಮತ್ತು ವಿಡಿಯೋ ಸ್ಥಿರ ಚಿತ್ರೀಕರಣ ದಾಖಲೆಗಳನ್ನು ಇಲಾಖೆಯು ಬಳಸಲು ಅಧಿಕಾರ ಹೊಂದಿರುತ್ತದೆ.

17. ಇಲಾಖೆಯಿಂದ ಧನಸಹಾಯವನ್ನು ಅಪೇಕ್ಷಿಸುವ ಸಂಘ-ಸಂಸ್ಥೆಗಳು ಚೆಕ್‌ಲಿಸ್ಟ್‌ನಲ್ಲಿ ಕೋರಿರುವಂತೆ ಕ್ರಮವಾಗಿ ದಾಖಲೆಗಳನ್ನು ಕ್ರಮ ಸಂಖ್ಯೆ ನಮೂದಿಸಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸೇವಾಸಿಂಧು ಮೂಲಕ ಸಲ್ಲಿಸಬೇಕು. ಪತ್ರಿಕಾ ಪ್ರಕಟಣೆಯಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು ಹಾಗೂ ಸೇವಾಸಿಂಧುವಿನಲ್ಲಿ ಧನಸಹಾಯ ಕೋರಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ ಮುಗಿದ ನಂತರ ಮತ್ತು ಸೇವಾಸಿಂಧು ಹೊರತುಪಡಿಸಿ ನೇರವಾಗಿ ಸ್ವೀಕೃತವಾಗುವ ಅರ್ಜಿಗಳನ್ನು ಧನಸಹಾಯ ನೀಡಲು ಪರಿಗಣಿಸಲಾಗುವುದಿಲ್ಲ.

18. ಜಿಲ್ಲಾ ಸಹಾಯಕ ನಿರ್ದೇಶಕರಿಂದ ಆನ್‌ಲೈನ್ ಮೂಲಕ ಸಂಘ-ಸಂಸ್ಥೆಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ತಾಂತ್ರಿಕ ಕಾರಣದಿಂದ ದಾಖಲೆಗಳು ಅಪ್‌ಲೋಡ್ ಆಗದಿದ್ದಲ್ಲಿ/ತಪ್ಪಾಗಿ ಸಲ್ಲಿಕೆಯಾಗಿದ್ದಲ್ಲಿ/ಬಿಟ್ಟುಹೋಗಿದ್ದಲ್ಲಿ ಮರು ಸಲ್ಲಿಸಲು 10 (ಹತ್ತು) ದಿನಗಳ ಕಾಲಾವಕಾಶ ನೀಡುವುದು.



Scanned by CamScanner

19. ನೋಂದಾಯಿತ ಸಂಘ-ಸಂಸ್ಥೆಗಳು ಕೆಳಕಂಡ ಅಂಶಗಳಿಗೆ ಕನಿಷ್ಠ ರೂ. 20/- ಛಾಪಾ ಕಾಗದದ ಮೇಲೆ ಸ್ವಯಂ ದೃಢೀಕರಣದ ಕರಾರು ಪತ್ರ ಒದಗಿಸುವುದು.

i. ಸಂಘ-ಸಂಸ್ಥೆ / ಟ್ರಸ್ಟಗಳ ಸದಸ್ಯರು ಇನ್ನೊಂದು ಸಂಘ-ಸಂಸ್ಥೆ/ಟ್ರಸ್ಟಗಳಿಗೆ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಾಗಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ii. ಇಲಾಖೆಯಿಂದ ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕಲಾವಿದರಿಗೆ ಇಲಾಖೆಯಿಂದ ಧನಸಹಾಯ ಪಡೆದ ಮೊತ್ತಕ್ಕೆ ಸಂಬಂಧಿಸಿದಂತೆ ಕಲಾವಿದರ ಗೌರವ ಸಂಭಾವನೆ, ಸಂಘಟನಾ ವೆಚ್ಚ ಮತ್ತಿತರ ಎಲ್ಲಾ ವೆಚ್ಚಗಳನ್ನು ಕಡ್ಡಾಯವಾಗಿ RTGS / NEFT / CHEQUE ಮೂಲಕವೇ ಪಾವತಿಸುತ್ತೇನೆ ಹಾಗೂ ಸದರಿ ವಿವರ (RTGS/NEFT/CHEQUE ವಿವರಗಳುಳ್ಳ ಬ್ಯಾಂಕ್ ಸ್ಟೇಟ್‌ಮೆಂಟ್) ನೀಡುತ್ತೇನೆ.

iii. ಇಲಾಖೆಯಿಂದ ಬಿಡುಗಡೆ ಮಾಡಿದ ಅನುದಾನವನ್ನು ಸಾಂಸ್ಕೃತಿಕ ಕಾರ್ಯಕ್ರಮ ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಬಳಕೆ ಮಾಡಿಕೊಂಡಲ್ಲಿ / ನಿಯಮಾನುಸಾರ ಬಳಕೆ ಮಾಡದೆ ಲೋಪವಾಗಿದ್ದಲ್ಲಿ / ನೀಡಿರುವ ಮಾಹಿತಿ ತಪ್ಪೆಂದು ಕಂಡುಬಂದಲ್ಲಿ / ಯಾವುದೇ ವ್ಯತ್ಯಾಸವಾದಲ್ಲಿ ಸರ್ಕಾರಕ್ಕೆ ಮರುಪಾವತಿ ಮಾಡಲು ಬದ್ಧನಾಗಿರುತ್ತೇನೆ.

iv. ನಮ್ಮ ಸಂಸ್ಥೆಯ ಸದಸ್ಯರಲ್ಲಿ ಶೇ. **50** ರಷ್ಟು ಸದಸ್ಯರು ಸಾಹಿತಿ, ಕಲಾವಿದರಾಗಿರುತ್ತಾರೆ ಎಂದು ದೃಢೀಕರಿಸುತ್ತೇನೆ.

v. ಸದರಿ ಆರ್ಥಿಕ ವರ್ಷದಲ್ಲಿ ಬೇರೆ ಇಲಾಖೆಯಿಂದ ಧನಸಹಾಯ ಪಡೆದಿರುವುದಿಲ್ಲ ಹಾಗೂ ಅನುದಾನದ ಪುನರಾವರ್ತನೆ ಆಗಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

vi. ಧನಸಹಾಯ ಪಡೆದ ವರ್ಷ ನಮ್ಮ ಸಂಘ-ಸಂಸ್ಥೆ/ಟ್ರಸ್ಟಗಳು ಇಲಾಖೆಯಿಂದ ಕಲಾ ತಂಡಗಳ ಪ್ರಾಯೋಜನೆ ಪಡೆಯುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

vii. ಇಲಾಖೆಯಿಂದ ಧನಸಹಾಯ ಪಡೆಯಲು ಸಂಸ್ಥೆಗಳು ಸಲ್ಲಿಸಿರುವ ಉದ್ದೇಶಿತ ಚಟುವಟಿಕೆಗಳಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಸಂಬಂಧಿತ ಆರ್ಥಿಕ ವರ್ಷದಲ್ಲಿ ಧನಸಹಾಯ ಪಡೆದಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

viii. ನಮ್ಮ ಸಂಘ-ಸಂಸ್ಥೆ/ ಟ್ರಸ್ಟಗಳ ಅಂಗ ಸಂಸ್ಥೆಗಳು, ಶಾಖಾ ಘಟಕಗಳು ಪ್ರತ್ಯೇಕವಾಗಿ ಅನುದಾನ ಪಡೆದಿಲ್ಲ ಅಥವಾ ಅನುದಾನಕ್ಕೆ ಅರ್ಜಿ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

20. ಇನ್ನು ಮುಂದೆ ಮೂರು ವರ್ಷ ನಿರಂತರವಾಗಿ ಅನುದಾನ ಪಡೆಯುವ ಸಂಘ-ಸಂಸ್ಥೆ / ಟ್ರಸ್ಟಗಳು 4ನೇ ವರ್ಷ ಧನಸಹಾಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.

21. ಧನಸಹಾಯ ಕೋರಿ ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ಕ್ರಿಯಾಯೋಜನೆಯಂತೆಯೇ ಕಾರ್ಯಕ್ರಮ ರೂಪುಗೊಳಿಸುವುದು. ಯಾವುದೇ ಬದಲಾವಣೆಗಳಿದ್ದರೆ ಜಿಲ್ಲಾ ಸಹಾಯಕ ನಿರ್ದೇಶಕರ ಅನುಮೋದನೆ ಪಡೆದು ಕಾರ್ಯಕ್ರಮ ಏರ್ಪಡಿಸುವುದು.

......5

Scanned by CamScanner

22. ಇಲಾಖೆಯಿಂದ ಧನಸಹಾಯ ಪಡೆದು ಆಯೋಜಿಸುವ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು ಕಾರ್ಯಕ್ರಮ ಆಯೋಜಿಸುವುದು ಹಾಗೂ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರನ್ನು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸುವುದು.

23. ಒಂದು ಸಂಘ-ಸಂಸ್ಥೆ/ಟ್ರಸ್ಟ್‌ಗಳಿಗೆ ಒಂದು ಆರ್ಥಿಕ ಸಾಲಿಗೆ ಕೊಡುವ ಗರಿಷ್ಠ ಅನುದಾನದ ಮಿತಿ ರೂ.2.00 ಲಕ್ಷಗಳಾಗಿರುತ್ತದೆ.

24. ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳನ್ನು ಜೂನ್‌ನಿಂದ ಜನವರಿ ಅಂತ್ಯದ ಒಳಗೆ ಪೂರ್ಣಗೊಳಿಸುವುದು. ಅನುಮೋದನೆಯನ್ವಯ ಜನವರಿ ನಂತರದಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಅರ್ಹತೆಯನುಸಾರ ಧನಸಹಾಯ ಬಿಡುಗಡೆಗೆ ಪರಿಗಣಿಸುವುದು.

25. ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಕನಿಷ್ಠ 7 ದಿನಗಳು ಮುಂಚಿತವಾಗಿ ಕಾರ್ಯಕ್ರಮದ ಆಹ್ವಾನಪತ್ರಿಕೆಯನ್ನು ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು ಕಲಾತಂಡ ತಂತ್ರಾಂಶದಲ್ಲಿ ನೋಂದಾಯಿಸಿಕೊಂಡು ಕಾರ್ಯಕ್ರಮ ಅನುಷ್ಠಾನ ಗೊಳಿಸುವುದು.

26. ಇಲಾಖೆಯಿಂದ ಧನಸಹಾಯ ಪಡೆದು ಏರ್ಪಡಿಸಲಾಗುವ ಕಾರ್ಯಕ್ರಮಗಳ ದಾಖಲೀಕರಣಕ್ಕೆ ಸಂಬಂಧಿಸಿದಂತೆ ಕಲಾತಂಡ ತಂತ್ರಾಂಶದಲ್ಲಿ ಕಡ್ಡಾಯವಾಗಿ ಕಾರ್ಯಕ್ರಮ ನಡೆಯುವ ಸ್ಥಳಗುರುತು ಅಪ್ಲೋಡ್ (Geotagged Photos) ಮಾಡುವುದು ಹಾಗೂ ಕಾರ್ಯಕ್ರಮದ ಛಾಯಾಚಿತ್ರಗಳನ್ನು (1. ವೇದಿಕೆ ಕಾರ್ಯಕ್ರಮ ಉದ್ಘಾಟನೆ ಹಾಗೂ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ 2. ಕಾರ್ಯಕ್ರಮದ ಪ್ರೇಕ್ಷಕರು 3. ವೇದಿಕೆ ಹಾಗೂ ಪ್ರೇಕ್ಷಕರು ಎರಡನ್ನೂ ಒಳಗೊಂಡ) ಮೂರು ಅಂಶಗಳು ಕಾಣುವಂತೆ ತೆಗೆದಿರುವ ಕನಿಷ್ಠ 5 ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವುದು.

27. ಸೇವಾಸಿಂಧು ಮೂಲಕ ಅರ್ಜಿ ಸಲ್ಲಿಸಿದ ಸಂಘ-ಸಂಸ್ಥೆ/ಟ್ರಸ್ಟ್‌ಗಳ ದಾಖಲೆಗಳನ್ನು ಪರಿಶೀಲಿಸಿ, ಮುಂದಿನ ಪ್ರಕ್ರಿಯೆಗಳಿಗೆ ಸಂಘ-ಸಂಸ್ಥೆ / ಟ್ರಸ್ಟ್‌ಗಳ ಅರ್ಜಿಗಳ ಅನುಮೋದಿತ / ತಿರಸ್ಕೃತ ಪಟ್ಟಿಯನ್ನು ಜಿಲ್ಲಾ ಸಹಾಯಕ ನಿರ್ದೇಶಕರು 5 (ಐದು) ದಿನಗಳ ಕಾಲಮಿತಿಯಲ್ಲಿ ಪ್ರಕಟಿಸುವುದು.

28. ಹೊರನಾಡಿನ ಸಂಘ-ಸಂಸ್ಥೆಗಳು ಕೇಂದ್ರ ಕಚೇರಿಗೆ ಆನ್‌ಲೈನ್ ಮೂಲಕ ಮುಂಗಡವಾಗಿ ಕಾರ್ಯಕ್ರಮದ ವಿವರ ಸಲ್ಲಿಸುವುದು ಹಾಗೂ ಸದರಿ ಸಂಘ-ಸಂಸ್ಥೆಗಳ ಧನಸಹಾಯದ ಬಗ್ಗೆ ಕೇಂದ್ರ ಕಚೇರಿಯ ಸಂಬಂಧಿತ ಶಾಖೆಯಿಂದ ಕ್ರಮವಹಿಸುವುದು.

## IV. ಧನಸಹಾಯ ಶಿಫಾರಸ್ಸು ಸಮಿತಿ

| | |
|---|---|
| 1. ಆಯಾ ಜಿಲ್ಲೆಗೆ ಸಂಬಂಧಿಸಿದ ವಿಭಾಗ ಮಟ್ಟದ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. | -ಅಧ್ಯಕ್ಷರು |
| 2. ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | -ಸದಸ್ಯ ಕಾರ್ಯದರ್ಶಿ |



Scanned by CamScanner

3. ಜಿಲ್ಲಾ ವ್ಯಾಪ್ತಿಗೆ ಬರುವ ಅಕಾಡೆಮಿ ಸದಸ್ಯರು (ಜಿಲ್ಲಾ ವ್ಯಾಪ್ತಿಯಲ್ಲಿ ಅಕಾಡೆಮಿಯ ಸದಸ್ಯರು ಇರದಿದ್ದಲ್ಲಿ ವಿಭಾಗ ಜಂಟಿ ನಿರ್ದೇಶಕರ ಸಮಾಲೋಚನೆ ಮೇರೆಗೆ ಕಲಾವಿದರನ್ನು ಸೇರ್ಪಡೆ ಮಾಡಿಕೊಳ್ಳುವುದು). - ಸದಸ್ಯರು

4. ಆಯಾ ಜಿಲ್ಲಾ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ - ಸದಸ್ಯರು

5. ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ - ಸದಸ್ಯರು

## V. ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡಲು ಅನುಸರಿಸಬೇಕಾದ ಮಾನದಂಡಗಳು:

1. ಧನಸಹಾಯ ಪಡೆಯಲಿಚ್ಛಿಸುವ ಸಂಘ-ಸಂಸ್ಥೆಯು ಮುಂಗಡವಾಗಿ ಇಲಾಖೆಗೆ ಸಲ್ಲಿಸಿರುವ ಕ್ರಿಯಾಯೋಜನೆಯಂತೆ ಸಹಾಯಕ ನಿರ್ದೇಶಕರನ್ನು ಆಹ್ವಾನಿಸಿ, ಕಲಾತಂಡ ತಂತ್ರಾಂಶದಲ್ಲಿ ವಿವರಗಳನ್ನು ಅಪ್ಲೋಡ್ ಮಾಡಿರುವ ಕಾರ್ಯಕ್ರಮಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ ಕಾರ್ಯಕ್ರಮಗಳನ್ನು ಪರಿಗಣಿಸತಕ್ಕದ್ದಲ್ಲ.

2. ಕನಿಷ್ಠ ಮೂರು ಸಾಂಸ್ಕೃತಿಕ/ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿರಬೇಕು. ಇದಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆ, ಕಾರ್ಯಕ್ರಮದ ಫೋಟೋ, ಪತ್ರಿಕಾ ವರದಿಯ ತುಣುಕು ಇತ್ಯಾದಿ ಅಗತ್ಯ ದಾಖಲೆಗಳನ್ನು ಲಗತ್ತಿಸಿರಬೇಕು. ಇಲಾಖೆಯಿಂದ ಪ್ರಾಯೋಜನೆ ಪಡೆದು ನಡೆಸಿರುವ ಕಾರ್ಯಕ್ರಮಗಳ ದಾಖಲೆಗಳನ್ನು ಪರಿಗಣಿಸತಕ್ಕದ್ದಲ್ಲ. ಈ ಎಲ್ಲಾ ಅಂಶಗಳನ್ನು ಸದರಿ ಸಮಿತಿಯು ಪರಿಶೀಲಿಸತಕ್ಕದ್ದು.

3. ಸಾಂಸ್ಕೃತಿಕ / ಸಾಹಿತ್ಯಿಕ ಉದ್ದೇಶಕ್ಕಾಗಿ ಮಾತ್ರ ಸ್ಥಾಪಿತವಾಗಿರುವ ಸಕ್ರಿಯವಾಗಿರುವ ಸಂಘ-ಸಂಸ್ಥೆಗಳನ್ನು ಮಾತ್ರ ಧನಸಹಾಯಕ್ಕಾಗಿ ಪರಿಗಣಿಸಿ ಶಿಫಾರಸ್ಸು ಮಾಡುವುದು.

4. ಯಾವುದೇ ನೊಂದಾಯಿತ ಸಂಘ-ಸಂಸ್ಥೆ/ಟ್ರಸ್ಟ್‌ಗಳಲ್ಲಿ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿಗಳು ಮತ್ತೊಂದು ಸಂಘ-ಸಂಸ್ಥೆ / ಟ್ರಸ್ಟ್‌ಗಳ ಪದಾಧಿಕಾರಿಯಾಗಿರುವುದಿಲ್ಲ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು.

5. ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಧನಸಹಾಯ ಕೋರಿ ಅರ್ಜಿ ಸಲ್ಲಿಸುವ ಸಂಘ-ಸಂಸ್ಥೆಗಳ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳ ಆರ್.ಡಿ. ಸಂಖ್ಯೆ ಇರುವ ಜಾತಿ ಪ್ರಮಾಣಪತ್ರ ಸಲ್ಲಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

6. ಕಳೆದ ಸಾಲಿನಲ್ಲಿ ಧನಸಹಾಯ ಪಡೆದಿರುವುದಕ್ಕೆ ಹಣಬಳಕೆ ಪ್ರಮಾಣಪತ್ರ ಮತ್ತು ಆಡಿಟ್ ವರದಿ ಸಲ್ಲಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

....7

Scanned by CamScanner

7. ನೊಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯಕ್ಕೆ ನಿಗದಿಪಡಿಸಿರುವ ಪ್ರತಿಯೊಂದು ಅರ್ಹತೆಗಳನ್ನು ಮಾನದಂಡವಾಗಿ ವಿಭಾಗ ಮಟ್ಟದ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಸಮಿತಿ ಪರಿಗಣಿಸಿ ಶಿಫಾರಸ್ಸು ಮಾಡುವುದು.

8. ಧನಸಹಾಯ ಮಂಜೂರಾತಿ ಸಂದರ್ಭದಲ್ಲಿ ಸಮಿತಿಯು ಅಗತ್ಯ ದಾಖಲೆಗಳನ್ನು ಸಲ್ಲಿಸಿದ ಸಂಘ-ಸಂಸ್ಥೆಗಳ ಪ್ರಸ್ತಾವನೆಯನ್ನು ಮಾತ್ರ ಪರಿಗಣಿಸುವುದು. ಅಪೂರ್ಣ ದಾಖಲೆಗಳನ್ನು/ ಸರಿಯಿಲ್ಲದ ಪ್ರಸ್ತಾವನೆಗಳನ್ನು ಯಾವ ಕಾರಣಕ್ಕೆ ತಿರಸ್ಕರಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟವಾದ ಸಕಾರಣಗಳನ್ನು ನೀಡಿ ಸೇವಾಸಿಂಧು ಮೂಲಕ ಸಹಾಯಕ ನಿರ್ದೇಶಕರು ಹಿಂಬರಹ ನೀಡುವುದು.

9. ಧನಸಹಾಯ ಕೋರಿಕೆ ಅರ್ಜಿಗಳನ್ನು ಸಲ್ಲಿಸುವ ಮತ್ತು ಧನಸಹಾಯ ಮಂಜೂರಾತಿ ಪ್ರಕ್ರಿಯೆ ಹಾಗೂ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೇಂದ್ರ ಕಚೇರಿಯಿಂದ ಹೊರಡಿಸುವ ವೇಳಾಪಟ್ಟಿಯಂತೆ ಪ್ರಕ್ರಿಯೆ ಜಾರಿಗೊಳಿಸುವುದು.

## VI. ಹಣಕಾಸು ನಿರ್ವಹಣೆ

1. ಸಂಘ-ಸಂಸ್ಥೆ / ಟ್ರಸ್ಟ್‌ಗಳು ನಿಗದಿತ ಅವಧಿಯಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಗುಣಮಟ್ಟ ಆಧರಿಸಿ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯು ಗರಿಷ್ಠ ರೂ.2.00 ಲಕ್ಷಗಳ ಮಿತಿಯೊಳಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡುವುದು.

2. ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಸಮಿತಿಯು ಶಿಫಾರಸ್ಸು ಮಾಡಿದ ಅನುದಾನವನ್ನು ಸರ್ಕಾರದ ಆದೇಶದಂತೆ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಜಿಲ್ಲಾ ಸಹಾಯಕ ನಿರ್ದೇಶಕರು ಖಜಾನೆ-2ರ ಮೂಲಕ ಪಾವತಿಸುವುದು.

3. ಧನಸಹಾಯ ಪಡೆದ 6 ತಿಂಗಳ ಒಳಗೆ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ವೆಚ್ಚಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸಲ್ಲಿಸುವುದು ಹಾಗೂ ಸಹಾಯಕ ನಿರ್ದೇಶಕರು ಕ್ರೋಢೀಕರಿಸಿ ವಿಭಾಗ ಮಟ್ಟದ ಕಚೇರಿಗೆ ಕಳುಹಿಸುವುದು. ವಿಭಾಗ ಮಟ್ಟದ ಜಂಟಿ ನಿರ್ದೇಶಕರು ಕ್ರೋಢೀಕೃತ ಮಾಹಿತಿಯನ್ನು ಕೇಂದ್ರ ಕಚೇರಿಗೆ ಕಳುಹಿಸುವುದು.

4. ಒಂದು ವೇಳೆ ಮೇಲೆ ತಿಳಿಸಿದಂತೆ ವೆಚ್ಚಪಟ್ಟಿ ಹಾಗೂ ಹಣಬಳಕೆ ಪ್ರಮಾಣಪತ್ರವನ್ನು ನಿಗದಿತ ಸಮಯದಲ್ಲಿ ಸಲ್ಲಿಸದೇ ಇದ್ದಲ್ಲಿ, ಮುಂದೆ ಇಲಾಖೆಯಿಂದ ನೀಡುವ ಯಾವುದೇ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ.

## VII. 2022-23ನೇ ಸಾಲಿನ ಪ್ರಸ್ತಾಪಿತ ವೇಳಾಪಟ್ಟಿ

| ಚಟುವಟಿಕೆ | ಪ್ರಸ್ತುತ ವರ್ಷ | ಆಯಾ ವರ್ಷದಲ್ಲಿ |
|---|---|---|
| ಜಿಲ್ಲಾ ಹಂತದಲ್ಲಿ ಸಂಘ-ಸಂಸ್ಥೆಗಳಿಂದ ಪ್ರಸ್ತಾಪಿತ ಚಟುವಟಿಕೆಗಳ ವಿವರ ಸ್ವೀಕರಿಸುವಿಕೆ. | ಪ್ರಸ್ತುತ ವರ್ಷದ ಜೂನ್ 25ನೇ ತಾರೀಖಿನಿಂದ ಜುಲೈ 20ನೇ ತಾರೀಖಿನವರೆಗೆ | ಆಯಾ ವರ್ಷದ ಮೇ 1ನೇ ತಾರೀಖಿನಿಂದ ಜೂನ್ 15ನೇ ತಾರೀಖಿನವರೆಗೆ |



Scanned by CamScanner

| | | |
|---|---|---|
| ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸಂಸ್ಥೆಗಳಿಂದ ಕಾರ್ಯಕ್ರಮ ಆಯೋಜನೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಗಳ ಪರಿಶೀಲನೆ. | ಪ್ರಸ್ತುತ ವರ್ಷದ ಜುಲೈ 20ನೇ ತಾರೀಖಿನಿಂದ ಜುಲೈ 30ನೇ ತಾರೀಖಿನವರೆಗೆ | ಆಯಾ ವರ್ಷದ ಜೂನ್ 16ನೇ ತಾರೀಖಿನಿಂದ ಜೂನ್ 26ನೇ ತಾರೀಖಿನವರೆಗೆ |
| ಜಿಲ್ಲಾ ಸಹಾಯಕ ನಿರ್ದೇಶಕರಿಂದ ಪರಿಶೀಲನೆ ಹಾಗೂ ದಾಖಲೆಗಳು ತಾಂತ್ರಿಕ ಕಾರಣದಿಂದ ಸಲ್ಲಿಕೆಯಾಗ ದಿದ್ದಲ್ಲಿ ಮರು ಸಲ್ಲಿಸಲು ಕಾಲಾವಕಾಶ (Seek clarification) | ಪ್ರಸ್ತುತ ವರ್ಷದ ಜುಲೈ 31ನೇ ತಾರೀಖಿನಿಂದ ಆಗಸ್ಟ್ 10ನೇ ತಾರೀಖಿನ ವರೆಗೆ | ಆಯಾ ವರ್ಷದ ಜೂನ್ 27ನೇ ತಾರೀಖಿನಿಂದ ಜುಲೈ 6ನೇ ತಾರೀಖಿನವರೆಗೆ |
| ಸಂಘ-ಸಂಸ್ಥೆಗಳಿಂದ ಸ್ವೀಕೃತವಾದ ಪ್ರಸ್ತಾಪಿತ ಚಟುವಟಿಕೆಗಳ ವಿವರಗಳನ್ನು ಪರಿಶೀಲಿಸಿ ಅರ್ಹ ಸಂಘ-ಸಂಸ್ಥೆಗಳ ಪಟ್ಟಿ ಪ್ರಕಟಿಸು ವುದು. | ಪ್ರಸ್ತುತ ವರ್ಷದ ಆಗಸ್ಟ್ 16ನೇ ತಾರೀಖಿನಂದು | ಆಯಾ ವರ್ಷದ ಜುಲೈ 10ನೇ ತಾರೀಖಿನಂದು |
| ಸಂಘ-ಸಂಸ್ಥೆಗಳಿಂದ ಮುಂಗಡವಾಗಿ ಸಲ್ಲಿಸಿದ ಕ್ರಿಯಾಯೋಜನೆಯಂತೆ ಕಾರ್ಯಕ್ರಮಗಳ ಆಯೋಜನೆ ಹಾಗೂ ಕಾರ್ಯಕ್ರಮದ ದಾಖಲೆಗಳನ್ನು ಅಪ್ಲೋಡ್ ಮಾಡುವುದು. (ಸಂಘ-ಸಂಸ್ಥೆಗಳು ನಿರಂತರ ಕಾರ್ಯಕ್ರಮ ನಡೆಸಬಹುದಾಗಿದ್ದು, ಈ ಅವಧಿಯಲ್ಲಿ ಕನಿಷ್ಠ ಮೂರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.) | ಪ್ರಸ್ತುತ ವರ್ಷದ ಆಗಸ್ಟ್ 17ನೇ ತಾರೀಖಿನಿಂದ ವರ್ಷದ ಅಂತ್ಯದವರೆಗೆ | ಆಯಾ ವರ್ಷದ ಜುಲೈ 11ನೇ ತಾರೀಖಿನಿಂದ ವರ್ಷದ ಅಂತ್ಯದವರೆಗೆ |

- ಧನಸಹಾಯ ಕೋರಿ ಪ್ರಸ್ತಾವನೆ ಸಲ್ಲಿಸಿದ ಸಂಘ-ಸಂಸ್ಥೆಗಳು ನಿಯಮಾನುಸಾರ 3 (ಮೂರು) ಕಾರ್ಯಕ್ರಮಗಳನ್ನು ಆಯೋಜಿಸಿ ದಾಖಲೆಗಳನ್ನು ಸೇವಾಸಿಂಧುವಿನಲ್ಲಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯು ತಿಂಗಳಲ್ಲಿ ಒಂದು ಬಾರಿ ಅಥವಾ ಅಗತ್ಯವಿದ್ದಲ್ಲಿ, ಸಂದರ್ಭಾನುಸಾರ ಸಮಿತಿಯ ಸಭೆ ಕರೆದು ಪರಿಶೀಲಿಸಿ ಶಿಫಾರಸ್ಸು ಮಾಡುವುದು.

- ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯ ಮೂಲಕ ಬಂದ ಪ್ರಸ್ತಾವನೆಗಳನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಸರ್ಕಾರದ ಅನುಮೋದನೆಗೆ ಸಲ್ಲಿಸುವುದು.

ಕೆ.ಆರ್.ರಮೇಶ್ 23/06/2022

(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

Scanned by CamScanner

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂವಾ 154 ಕಸಧ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 02.01.2023.

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 154 ಕಸಧ 2022, ದಿನಾಂಕ: 23.06.2022ರಲ್ಲಿ ಸಾಮಾನ್ಯ / ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟಗಳಿಗೆ ಧನಸಹಾಯ ಪರಿಷ್ಕೃತ ಮಾರ್ಗಸೂಚಿಗೆ ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ಪರಿಷ್ಕರಣೆ / ವಿನಾಯಿತಿ ನೀಡಲಾಗಿದೆ ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

| ಪ್ರಸ್ತುತ ಮಾರ್ಗಸೂಚಿಯಲ್ಲಿನ ಅಂಶಗಳು | ಪರಿಷ್ಕರಣೆ / ವಿನಾಯಿತಿ ನೀಡಿರುವ ಅಂಶಗಳು |
|---|---|
| ಮಾರ್ಗಸೂಚಿಯ ಕಂಡಿಕೆ III (18)ರಲ್ಲಿ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಆನ್ ಲೈನ್ ಮೂಲಕ ಸಂಘ-ಸಂಸ್ಥೆಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ತಾಂತ್ರಿಕ ಕಾರಣದಿಂದ ದಾಖಲೆಗಳು ಅಪ್‌ಲೋಡ್ ಆಗದಿದ್ದಲ್ಲಿ/ತಪ್ಪಾಗಿ ಸಲ್ಲಿಕೆಯಾಗಿದ್ದಲ್ಲಿ/ ಬಿಟ್ಟು ಹೋಗಿದ್ದಲ್ಲಿ ಮರು ಸಲ್ಲಿಸಲು 10 ದಿನಗಳ ಕಾಲಾವಕಾಶ ನೀಡುವುದು. | ಸೀಕ್ ಕ್ಲಾರಿಫಿಕೇಷನ್ ಅಡಿ ನಿಗದಿತ ಅವಧಿಯೊಳಗೆ ಮರು ದಾಖಲೆ ಸಲ್ಲಿಸದೇ ತಿರಸ್ಕೃತಗೊಂಡ ಅರ್ಜಿಗಳು ಹಾಗೂ ತಾಂತ್ರಿಕ ಕಾರಣದಿಂದ ಸೇವಾ ಸಿಂಧು ತಂತ್ರಾಂಶದಲ್ಲಿ ದಾಖಲೆ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ / ತಪ್ಪಾಗಿ ಅಪ್ಲೋಡ್ ಆಗಿದ್ದಲ್ಲಿ ಸಂಸ್ಥೆಯವರಿಂದ ಭೌತಿಕವಾಗಿ ಸದರಿ ದಾಖಲೆಗಳನ್ನು ಪಡೆದು ದಾಖಲೆಗಳು ಸಮರ್ಪಕವಾಗಿದ್ದರೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿರುವ ಬಗ್ಗೆ ದಾಖಲೆಗಳ ಮೂಲಕ ಖಚಿತಪಡಿಸಿಕೊಂಡು ಜಿಲ್ಲಾ ಸಮಿತಿಯ ಮುಂದೆ ಮಂಡಿಸುವುದು. |
| ಮಾರ್ಗಸೂಚಿಯ ಕಂಡಿಕೆ III (20)ರಲ್ಲಿ ಇನ್ನು ಮುಂದೆ 3 ವರ್ಷ ನಿರಂತರವಾಗಿ ಅನುದಾನ ಪಡೆಯುವ ಸಂಘ-ಸಂಸ್ಥೆ/ಟ್ರಸ್ಟ್‌ಗಳು 4ನೇ ವರ್ಷ ಧನಸಹಾಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. | ಕೈಬಿಡಲಾಗಿದೆ |
| ಮಾರ್ಗಸೂಚಿಯ ಕಂಡಿಕೆ III (21) ರಲ್ಲಿ ಧನಸಹಾಯ ಕೋರಿ ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ಕ್ರಿಯಾಯೋಜನೆಯಂತೆಯೇ ಕಾರ್ಯಕ್ರಮ ರೂಪುಗೊಳಿಸುವುದು. ಯಾವುದೇ ಬದಲಾವಣೆಗಳು ಇದ್ದರೆ, ಜಿಲ್ಲಾ ಸಹಾಯಕ ನಿರ್ದೇಶಕರ ಅನುಮೋದನೆ ಪಡೆದು ಕಾರ್ಯಕ್ರಮ ಏರ್ಪಡಿಸುವುದು. | ಕೈಬಿಡಲಾಗಿದೆ |
| ಮಾರ್ಗಸೂಚಿಯ ಕಂಡಿಕೆ III (22)ರಲ್ಲಿ ಧನಸಹಾಯ ಪಡೆದು ಆಯೋಜಿಸುವ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು ಕಾರ್ಯಕ್ರಮ ಆಯೋಜಿಸುವುದು ಹಾಗೂ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರನ್ನು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸುವುದು. | ಕೈಬಿಡಲಾಗಿದೆ |
| ಮಾರ್ಗಸೂಚಿಯ ಕಂಡಿಕೆ III (23)ರಲ್ಲಿ ಒಂದು ಸಂಘ-ಸಂಸ್ಥೆ/ಟ್ರಸ್ಟಗಳಿಗೆ ಒಂದು ಆರ್ಥಿಕ ಸಾಲಿಗೆ ಕೊಡುವ ಗರಿಷ್ಠ ಅನುದಾನದ ಮಿತಿ ರೂ.2.00ಲಕ್ಷಗಳಾಗಿರುತ್ತದೆ. | ಒಂದು ಸಂಘ-ಸಂಸ್ಥೆ/ಟ್ರಸ್ಟಗಳಿಗೆ ಒಂದು ಆರ್ಥಿಕ ಸಾಲಿಗೆ ಕೊಡುವ ಗರಿಷ್ಠ ಅನುದಾನದ ಮಿತಿ ರೂ.5.00 ಲಕ್ಷಗಳಾಗಿರುತ್ತದೆ. |



Scanned by CamScanner

| | |
|---|---|
| ಮಾರ್ಗಸೂಚಿಯ ಕಂಡಿಕೆ III (24)ರಲ್ಲಿ ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳನ್ನು ಜೂನ್‌ನಿಂದ ಜನವರಿ ಅಂತ್ಯದ ಒಳಗೆ ಪೂರ್ಣಗೊಳಿಸುವುದು. ಅನುಮೋದನೆಯನ್ವಯ ಜನವರಿ ನಂತರದಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಅರ್ಹತೆಯನುಸಾರ ಧನಸಹಾಯ ಬಿಡುಗಡೆಗೆ ಪರಿಗಣಿಸುವುದು. | ಕೈಬಿಡಲಾಗಿದೆ |
| ಮಾರ್ಗಸೂಚಿಯ ಕಂಡಿಕೆ III (25)ರಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಕನಿಷ್ಠ 7 ದಿನಗಳು ಮುಂಚಿತವಾಗಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು, ಕಲಾತಂಡ ತಂತ್ರಾಂಶದಲ್ಲಿ ನೋಂದಾಯಿಸಿಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸುವುದು. | ಮುಂದುವರೆದು ಇಲಾಖೆಯಿಂದ ಧನಸಹಾಯ ಪಡೆದ ನಂತರ ಏರ್ಪಡಿಸುವ ಕಾರ್ಯಕ್ರಮದ ವಿವರವನ್ನು ಕಲಾತಂಡ ತಂತ್ರಾಂಶದಲ್ಲಿ ಕಾರ್ಯಕ್ರಮದ ಫೋಟೋ ಮತ್ತು ವಿಡಿಯೋ ಅಪ್ ಲೋಡ್ ಮಾಡುವಲ್ಲಿ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ, ಸದರಿ ಫೋಟೋ ಮತ್ತು ವಿಡೀಯೊಗಳನ್ನು ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು, ಸಹಾಯಕ ನಿರ್ದೇಶಕರ ಅಧಿಕೃತ ಕಚೇರಿ ಮೇಲ್‌ಗೆ ಕಳುಹಿಸುವುದು. ಕಾರ್ಯಕ್ರಮ ನಡೆದ ಬಗ್ಗೆ ಸಹಾಯಕ ನಿರ್ದೇಶಕರು ದೃಢೀಕರಿಸುವುದು. |
| ಮಾರ್ಗಸೂಚಿಯ ಕಂಡಿಕೆ III (26)ರಲ್ಲಿ ಇಲಾಖೆಯಿಂದ ಧನಸಹಾಯ ಪಡೆದು ಏರ್ಪಡಿಸಲಾಗುವ ಕಾರ್ಯಕ್ರಮಗಳ ದಾಖಲೀಕರಣಕ್ಕೆ ಸಂಬಂಧಿಸಿದಂತೆ, ಕಲಾತಂಡ ತಂತ್ರಾಂಶದಲ್ಲಿ ಕಡ್ಡಾಯವಾಗಿ ಕಾರ್ಯಕ್ರಮ ನಡೆಯುವ ಸ್ಥಳ ಗುರುತು ಅಪ್ ಲೋಡ್ (ಜಿಯೋ ಟ್ಯಾಗ್ ಫೋಟೋಸ್) ಮಾಡುವುದು. ಹಾಗೂ ಕಾರ್ಯಕ್ರಮದ ಛಾಯಾಚಿತ್ರಗಳನ್ನು (1. ವೇದಿಕೆ ಕಾರ್ಯಕ್ರಮ ಉದ್ಘಾಟನೆ ಹಾಗೂ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ, 2. ಕಾರ್ಯಕ್ರಮದ ಪ್ರೇಕ್ಷಕರು, 3. ವೇದಿಕೆ ಹಾಗೂ ಪ್ರೇಕ್ಷಕರು ಎರಡನ್ನು ಒಳಗೊಂಡ) ಮೂರು ಅಂಶಗಳು ಕಾಣುವಂತೆ ತೆಗೆದಿರುವ ಕನಿಷ್ಠ 5 ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವುದು. | ಕಾರ್ಯಕ್ರಮದ ಛಾಯಾಚಿತ್ರಗಳನ್ನು (1. ವೇದಿಕೆ ಕಾರ್ಯಕ್ರಮ ಉದ್ಘಾಟನೆ ಹಾಗೂ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ, 2. ಕಾರ್ಯಕ್ರಮದ ಪ್ರೇಕ್ಷಕರು, 3. ವೇದಿಕೆ ಹಾಗೂ ಪ್ರೇಕ್ಷಕರು ಎರಡನ್ನು ಒಳಗೊಂಡ) ಮೂರು ಅಂಶಗಳು ಕಾಣುವಂತೆ ತೆಗೆದಿರುವ ಕನಿಷ್ಠ 5 ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವುದು. |
| ಮಾರ್ಗಸೂಚಿಯ ಕಂಡಿಕೆ V (1)ರಲ್ಲಿ ಧನಸಹಾಯ ಪಡೆಯಲಿಚ್ಛಿಸುವ ಸಂಘ-ಸಂಸ್ಥೆಯು ಮುಂಗಡವಾಗಿ ಇಲಾಖೆಗೆ ಸಲ್ಲಿಸಿರುವ ಕ್ರಿಯಾಯೋಜನೆಯಂತೆ ಸಹಾಯಕ ನಿರ್ದೇಶಕರನ್ನು ಆಹ್ವಾನಿಸಿ ಕಲಾತಂಡ ತಂತ್ರಾಂಶದಲ್ಲಿ ವಿವರ ಗಳನ್ನು ಅಪ್‌ಲೋಡ್ ಮಾಡಿರುವ ಕಾರ್ಯಕ್ರಮಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಇತರೆ ಸಂಘ-ಸಂಸ್ಥೆಗಳ ಸಹಯೋಗ ದೊಂದಿಗೆ ಆಯೋಜಿಸಿದ ಕಾರ್ಯಕ್ರಮಗಳನ್ನು ಪರಿಗಣಿಸತಕ್ಕದ್ದಲ್ಲ. | ಕೈಬಿಡಲಾಗಿದೆ |
| ಮಾರ್ಗಸೂಚಿಯ ಕಂಡಿಕೆ V (2)ರಲ್ಲಿ ಕನಿಷ್ಠ ಮೂರು ಸಾಂಸ್ಕೃತಿಕ/ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿರಬೇಕು. ಇದಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆ, ಕಾರ್ಯಕ್ರಮದ ಫೋಟೋ, ಪತ್ರಿಕಾ ವರದಿಯ ತುಣುಕು ಇತ್ಯಾದಿ ಅಗತ್ಯ ದಾಖಲೆಗಳನ್ನು ಲಗತ್ತಿಸಿರಬೇಕು. ಇಲಾಖೆಯಿಂದ ಪ್ರಾಯೋಜನೆ ಪಡೆದು ನಡೆಸಿರುವ ಕಾರ್ಯಕ್ರಮಗಳ ದಾಖಲೆಗಳನ್ನು ಪರಿಗಣಿಸತಕ್ಕದ್ದಲ್ಲ. ಈ ಎಲ್ಲಾ ಅಂಶಗಳನ್ನು ಸದರಿ ಸಮಿತಿಯು ಪರಿಶೀಲಿಸತಕ್ಕದ್ದು. | ಕೈಬಿಡಲಾಗಿದೆ |

...3

Scanned by CamScanner

| | |
|---|---|
| ಮಾರ್ಗಸೂಚಿಯ ಕಂಡಿಕೆ V (3)ರಲ್ಲಿ ಸಾಂಸ್ಕೃತಿಕ / ಸಾಹಿತ್ಯಿಕ ಉದ್ದೇಶಕ್ಕಾಗಿ ಮಾತ್ರ ಸ್ಥಾಪಿತ ವಾಗಿರುವ ಸಕ್ರಿಯವಾಗಿರುವ ಸಂಘ-ಸಂಸ್ಥೆ ಗಳನ್ನು ಮಾತ್ರ ಧನಸಹಾಯಕ್ಕಾಗಿ ಪರಿಗಣಿಸಿ ಶಿಫಾರಸ್ಸು ಮಾಡುವುದು. | ಮುಂದುವರೆದು, ಸೇವಾ ಸಿಂಧುವಿನಲ್ಲಿ ಸ್ವೀಕೃತವಾದ ಅರ್ಜಿಗಳಲ್ಲಿ ವಿವಿದ್ದೋದ್ದೇಶ ಅಂಶಗಳನ್ನು ಹೊಂದಿದ ಕಾರಣಕ್ಕಾಗಿ ತಿರಸ್ಕೃತಗೊಂಡ ಅರ್ಜಿಗಳನ್ನು ಪುನಃ ಜಿಲ್ಲಾ ಸಮಿತಿಯ ಮುಂದೆ ಮಂಡಿಸಲು ಸದರಿ ಸಂಸ್ಥೆಗಳು ಕ್ರಿಯಾಶೀಲವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ದಾಖಲೆಗಳನ್ನು ಪಡೆದು, ದಾಖಲೆಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಂಡು, ಶಿಫಾರಸ್ಸಿನೊಂದಿಗೆ ಅಂಥಹ ಸಂಸ್ಥೆಗಳ ಪ್ರತ್ಯೇಕ ಪಟ್ಟಿಯನ್ನು ತಯಾರಿಸಿ ಸರ್ಕಾರದ ಅವಗಾಹನೆಗೆ ತರುವುದು. |
| ಮಾರ್ಗಸೂಚಿಯ ಕಂಡಿಕೆ VI (1)ರಲ್ಲಿ ಸಂಘ-ಸಂಸ್ಥೆ/ಟ್ರಸ್ಟ್‌ಗಳು ನಿಗದಿತ ಅವಧಿಯಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಗುಣಮಟ್ಟ ಆಧರಿಸಿ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಧನಸಹಾಯ ಶಿಫಾರಸ್ಸು ಸಮಿತಿಯು. ಗರಿಷ್ಠ ರೂ.2.00 ಲಕ್ಷಗಳ ಮಿತಿಯೊಳಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡುವುದು. | ಸಂಘ-ಸಂಸ್ಥೆ/ಟ್ರಸ್ಟ್‌ಗಳು ನಿಗದಿತ ಅವಧಿಯಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಗುಣಮಟ್ಟ ಆಧರಿಸಿ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಧನಸಹಾಯ ಶಿಫಾರಸ್ಸು ಸಮಿತಿಯು. ಗರಿಷ್ಠ ರೂ.5.00 ಲಕ್ಷಗಳ ಮಿತಿಯೊಳಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡುವುದು |
| ಮಾರ್ಗಸೂಚಿಯ ಕಂಡಿಕೆ VII (1)ನೇ ಪ್ಯಾರಾದಲ್ಲಿ ಧನಸಹಾಯ ಕೋರಿ ಪ್ರಸಾವನೆ ಸಲ್ಲಿಸಿದ ಸಂಘ-ಸಂಸ್ಥೆಗಳು ನಿಯಮಾನುಸಾರ 3 ಕಾರ್ಯಕ್ರಮಗಳನ್ನು ಆಯೋಜಿಸಿ, ದಾಖಲೆಗಳನ್ನು ಸೇವಾ ಸಿಂಧುವಿನಲ್ಲಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸು ಸಮಿತಿಯು ತಿಂಗಳಲ್ಲಿ ಒಂದು ಬಾರಿ ಅಥವಾ ಅಗತ್ಯವಿದ್ದಲ್ಲಿ ಸಂದರ್ಭಾನುಸಾರ ಸಮಿತಿಯ ಸಭೆ ಕರೆದು ಪರಿಶೀಲಿಸಿ, ಶಿಫಾರಸು ಮಾಡುವುದು. | ಸೇವಾ ಸಿಂಧುವಿನಲ್ಲಿ ಅರ್ಹಗೊಂಡ ಸಂಸ್ಥೆಗಳಿಂದ ಈಗಾಗಲೇ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿರುವ ಬಗ್ಗೆ ದಾಖಲೆಗಳನ್ನು ಪಡೆದು ಜಿಲ್ಲಾ ಸಮಿತಿಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡುವುದು.<br><br>ಇಲಾಖೆಯಿಂದ ಪ್ರಾಯೋಜನೆ ಪಡೆದು ನಡೆಸಿರುವ ದಾಖಲೆಗಳನ್ನು ಪರಿಗಣಿಸತಕ್ಕದ್ದಲ್ಲ |

**ವಿಶೇಷ ಸೂಚನೆ:** ಸಂಘ-ಸಂಸ್ಥೆಗಳು ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವಾಗ ಅಗತ್ಯ ದಾಖಲೆಗಳನ್ನು ಒಮ್ಮೆ ಪಡೆದು ತಂತ್ರಾಂಶದಲ್ಲಿ ಸಂಗ್ರಹಿಸುವುದು. ಪ್ರತಿ ವರ್ಷ ಮುಂದುವರೆದ ಅಗತ್ಯ ದಾಖಲೆಗಳನ್ನು ಮಾತ್ರ ಪಡೆದುಕೊಳ್ಳುವುದು ಸೂಕ್ತ ಹಾಗೂ ತಾಂತ್ರಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

S. Geetha 5/1/2023

(ಎಸ್. ಗೀತಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ(ಸಂಸ್ಕೃತಿ)

**ಇವರಿಗೆ:-**

1. ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿ.ಸಿ.ಎಲ್, 6ನೇ ಮಹಡಿ, ಔಷಧ ನಿಯಂತ್ರಣ ಕಚೇರಿ, ಪ್ಯಾಲೇಸ್ ರಸ್ತೆ, ಬೆಂಗಳೂರು.



Scanned by CamScanner

2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7 / ಗಣಕ ಕೋಶ), ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner